**ಗೋವಿಂದರಾಯ ಹಮ್ಮಣ್ಣ ನಾಯಕ**

**ಹುಟ್ಟು:** ಸೆ. 18, 1935, (ಸೂರ್ವೆ, ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ)
**ಸಾವು:** ಮೇ 26, 2023 (ಮೈಸೂರು)
**ತಂದೆ:** ಹಮ್ಮಣ್ಣ ರಾಕು ನಾಯಕ (ಸ್ವಾತಂತ್ರ್ಯ ಹೋರಾಟಗಾರರು, ಯಕ್ಷಗಾನ ಕಲಾವಿದರು.
**ತಾಯಿ:** ಬಾಳು ಹಮ್ಮಣ್ಣ ನಾಯಕ
**ಪತ್ನಿ:** ಮೀರಾ ನಾಯಕ, ಮಹಿಳಾಪರ ಚಿಂತಕಿ ಮತ್ತು ಹೋರಾಟಗಾರ್ತಿ
**ಮಗಳು:** ಕೀರ್ತಿ ನಾಯಕ
**ಅಳಿಯ:** ಮದನ ನಾಯಕ
**ಮೊಮ್ಮಗಳು:** ಎಂ.ಕೆ. ಚಕಿತ
**ವಿದ್ಯಾಭ್ಯಾಸ:** ಎಂ.ಎ., ಬಿ.ಎಲ್. (ಬಾಸಗೋಡ, ಅಂಕೋಲಾ, ಮೈಸೂರು.)
**ಉದ್ಯೋಗ:** ಯುವರಾಜಾ ಕಾಲೇಜು, ಮಹಾರಾಜಾ ಕಾಲೇಜು, ಮೈಸೂರು ವಿಶ್ವವಿದ್ಯಾಲಯ.
**ಮುಖ್ಯ ಕೃತಿಗಳು:** 'ಸಮಕಾಲೀನ' (1973), 'ಅನಿವಾರ್ಯ' (1980), 'ನಿರಪೇಕ್ಷ' (1984), 'ನಿಜದನಿ' (1988), 'ವಿನಯ ವಿಮರ್ಶೆ' (1991), 'ಹರಿಶ್ಚಂದ್ರ ಕಾವ್ಯ – ಓದು ವಿಮರ್ಶೆ (2002), 'ಗುಣಗೌರವ' (2002), 'ದಲಿತ ಹೋರಾಟ – ಗಂಭೀರ ಸವಾಲುಗಳು' (2004), 'ಕೃತಿಸಾಕ್ಷಿ' (2006), 'ಸ್ಥಿತಿಪ್ರಜ್ಞೆ' (2007), 'ಮತ್ತೆ ಮತ್ತೆ ಪಂಪ' (2008), 'ಉತ್ತರಾರ್ಧ' (2011).
**ಪ್ರಶಸ್ತಿಗಳು:** ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಜಿ.ಎಸ್.ಎಸ್. ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ.

ಬಾಳು ಎಂದರೆ ಹರಿತವಾದ ಕತ್ತಿ. ಕ್ರಿಯಾಪದವಾಗಿ, 'ಬಾಳು' ಎಂದರೆ ಅರ್ಥಪೂರ್ಣವಾಗಿ ಜೀವನ ನಡೆಸುವುದು. ಎಷ್ಟೊಂದು ಸಂಕೀರ್ಣ ಅರ್ಥಗಳು. ಅಂಕೋಲಾದ, ಕನ್ನಡದ ಹಿರಿಯರಾದ ಸ.ಪ. ಗಾಂವ್ಕರ್ ಅವರು, ಮೈಸೂರಿನ 'ಸಾರ್ವಜನಿಕ ವಿದ್ಯಾರ್ಥಿನಿಲಯ'ದ ಸುಬ್ಬಣ್ಣನವರು, ಅದೇ ಅಂಕೋಲಾದ ಸಮಾಜವಾದಿ ದಿನಕರ ದೇಸಾಯಿ, ಎಡಪಂಥೀಯ ಹೋರಾಟಗಾರರಾದ ಗಿರಿ ಪಿಕಳೆ ಮಾಸ್ತರು ಮುಂತಾದವರು ಬಿತ್ತಿದ ಕನಸು, ನೀಡಿದ ನೆರವು, ತೋರಿಸಿದ ಹಾದಿಗಳು ಅವರನ್ನು ಕಟೆದು ಶಿಲ್ಪವಾಗಿಸಿದವು. ಎಲ್ಲಕ್ಕಿಂತ ಹೆಚ್ಚಾಗಿ ತಾನು ಸ್ವಾತಂತ್ರ್ಯ ಹೋರಾಟಗಾರರ ಮನೆತನಕ್ಕೆ ಸೇರಿದವನೆನ್ನುವುದು ಅವರಿಗೆ ಸದಾ ಹೆಮ್ಮೆಯ ಸಂಗತಿಯಾಗಿತ್ತು. ತನ್ನ ಹಿರಿಯರ ಹೋರಾಟಗಳನ್ನು ಎಷ್ಟು ಹೇಳಿದರೂ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ಅದು ನ್ಯಾಯಸಮ್ಮತ ಕೂಡ. ಈ ಭಾವುಕ ವ್ಯಕ್ತಿ ಯಕ್ಷಗಾನದಲ್ಲಿ ಆಸಕ್ತರು, ಬೇಂದ್ರೆ ಮತ್ತು ಇತರರ ಕವಿತೆಗಳನ್ನು ಮೈಮರೆತು ಹಾಡುತ್ತಿದ್ದರು.

ಅವರಿಗೆ ಅರವತ್ತು ವರ್ಷಗಳಿಗೂ ಮೀರಿ ಆಸರೆಯಿತ್ತ ಮೈಸೂರು ಕನ್ನಡ ಸಾಹಿತ್ಯದ ಎರಡೂ ಕವಲುಗಳ (ನವೋದಯ ಮತ್ತು ನವ್ಯ) ಮುಖ್ಯ ಲೇಖಕರ ಪರಿಚಯ-ಗೆಳೆತನ ಮಾಡಿಕೊಟ್ಟದ್ದು ಅವರ ಮೇಲಿನ ಸಾಹಿತ್ಯಕ ಪ್ರಭಾವಗಳನ್ನು ರೂಪಿಸಿತು. ಮೈಸೂರು ವಿಶ್ವವಿದ್ಯಾಲಯದ ಅದ್ಭುತ ಪರಂಪರೆ ಮತ್ತು ಅಷ್ಟೇ ತೀವ್ರವಾದ ರಾಜಕೀಯಗಳು ಅವರಿಗೆ ಕಟ್ಟಿಕೊಟ್ಟ ಸಿಹಿ-ಕಹಿಗಳ ಬುತ್ತಿಯನ್ನು ಅವರು ಕೊನೆಯ ಕ್ಷಣದವರೆಗೂ ಉಣ್ಣುತ್ತಲೇ ಇದ್ದರು. ಅಂತೆಯೇ ನವ್ಯದ ಏರುವೆಯ ದಿನಗಳು ಕಳೆದ ಬಳಿಕ ಮೂಡಿಬಂದ ದಲಿತ-ಬಂಡಾಯ ಸಾಹಿತ್ಯದ ಆಶಯಗಳನ್ನು ಅವರು ತೆರೆದ ತೋಳುಗಳಿಂದ ಸ್ವಾಗತಿಸಿದರು. ನವ್ಯದ ತಾತ್ವಿಕತೆಗೆ, 'ತೆಗೆದುಕೋ ನೀ ಕೊಟ್ಟ ವಸ್ತ್ರ ವಿಲಾಸ' ಎಂದು ವಿದಾಯ ಹೇಳಿದರು.

ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ ಮುಂತಾದ ಲೇಖಕರ ಬಗ್ಗೆ